

ನಿರ್ಮಾಣದ ಹಂತದಲ್ಲಿರುವ ರಾಮ ಜನ್ಮಭೂಮಿ ಮಂದಿರ

# ಭಕ್ತಿ-ಶಕ್ತಿ

## ದೇಶದ ಪ್ರವಾಸಿನಕ್ಷೆಯಲ್ಲಿ ಹೊಸ ಬೆಳ್ಳಿಚುಕ್ಕಿ

ಹರ್ಷಚಿತ್ತ ಜನರ ಗುಂಪುಗಳಿಂದ ನಗರದ ಎಲ್ಲ ರಸ್ತೆಗಳು ತುಂಬಿ ತುಳುಕಿದವು. ರಾಜಮಾರ್ಗದಲ್ಲಿ ನೆರೆದ ಜನಸಂದಣಿ ಸಮುದ್ರದ ಅಲೆಗಳಂತೆ ಕಾಣಿಸುತ್ತ, ಆ ಸಮೂಹದ ಸದ್ದುಗದ್ದಲ ಸಾಗರದ ಅಲೆಗಳ ಅನುರಣದಂತೆ ಕೇಳಿಸುತ್ತಿತ್ತು. ಇಕ್ಕೆಲಗಳಲ್ಲಿ ಸಾಲು ಮರಗಳಿದ್ದ ರಸ್ತೆಗಳಿಗೆ ನೀರು ಸಿಂಪಡಿಸಲಾಗಿತ್ತು. ಮನೆಗಳ ಮೇಲೆ ಧ್ವಜಗಳು ಹಾರುತ್ತಿದ್ದವು.

ರಾಮನ ಪಟ್ಟಾಭಿಷೇಕದ ಸಂಭ್ರಮಕ್ಕೆ ಸಜ್ಜಾಗಿದ್ದ ಅಯೋಧ್ಯಾ ನಗರಿ 'ವಾಲ್ಮೀಕಿ ರಾಮಾಯಣ'ದಲ್ಲಿ ಬಣ್ಣನೆಗೊಂಡಿರುವುದು ಹೀಗೆ. ಈಗ ಅಂತಹುದೇ ಸಂಭ್ರಮ, ಜ. 22ರಂದು ನಡೆಯಲಿರುವ 'ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ' ಸಮಾರಂಭದ ಕಾರಣದಿಂದಾಗಿ ಅಯೋಧ್ಯೆಯಲ್ಲಿ ಮರುಕಳಿಸಿದೆ. ಆ ಸಂಭ್ರಮದ ಅಲೆಗಳ ಅನುರಣನ ದೇಶದ ವಿವಿಧ ಭಾಗಗಳಲ್ಲೂ ಕಾಣಿಸಿಕೊಂಡಿದೆ.

ಉತ್ತರ ಪ್ರದೇಶದ ಅಯೋಧ್ಯೆಯೀಗ ದೇಶದ



ಅಯೋಧ್ಯೆಯ ಕೀರ್ತಿಯನ್ನು ಎಲ್ಲೆಡೆಗೆ ಸಾರುವಂತಿರುವ ಬೃಹತ್ ನಗಾರಿಗೆ ಕಲಾವಿದರಿಂದ ಸಿಂಗಾರದ ಫಿನಿಶಿಂಗ್ ಟಚ್